## ಹೊಗಳಿ ಹೊನ್ನ ಶೂಲಕ್ಕೇರಿಸದಿರಿ

ಇತ್ತೀಚೆಗೆ ರಿಯಾಲಿಟಿ ಶೋಗಳಲ್ಲಿ ಸ್ಪರ್ಧಿಗಳ ಹೊಗಳಿಕೆ ಅಗತ್ಯಕ್ಕಿಂತ ಜಾಸ್ತಿನೇ ಆಗುತ್ತಿದೆ. ಸರಿಗಮಪ ಡಾನ್ಸ್ ಶೋಗಳಲ್ಲೂ ಅಷ್ಟೆ. ಹಾಡುಗಾರರು ಎಷ್ಟೋ ಸಂದರ್ಭದಲ್ಲಿ ಶ್ರುತಿ ತಪ್ಪಿರುತ್ತಾರೆ. ತೀರ್ಪುಗಾರರು ಜಿದ್ದಿಗೆ ಬಿದ್ದವರ ಹಾಗೆ ಒಬ್ಬರಿಗಿಂತ ಒಬ್ಬರು ಹಾಡುಗಾರರನ್ನು ಹೊಗಳಲು ಶುರುಮಾಡುತ್ತಾರೆ.

ಮೊದಲೆಲ್ಲ ಸ್ಪರ್ಧಿಗಳ ತಪ್ಪನ್ನು ಜಡ್ಜಸ್ ನಯವಾಗಿ ತಿಳಿಸಿ ತಿದ್ದುಕೊಳ್ಳಲು ಉತ್ತೇಜಿಸುತ್ತಿದ್ದರು. ಹಾಗೂ ಅಲ್ಲಿಯೇ ಸರಿ ಮಾಡಿ ಹಾಡಿಸುತ್ತಿದ್ದರು. ಈಗೀಗ ಸ್ಪರ್ಧಿಗಳನ್ನು ಹೊಗಳಿ ಹೊಗಳಿ ಅಟ್ಟಕ್ಕೆ ಏರಿಸಿಬಿಡುತ್ತಾರೆ. ಇದು ಅವರಿಗೆ ಉತ್ತಮ ಬೆಳವಣಿಗೆಯಲ್ಲವೆಂದು ಗೊತ್ತಿದ್ದರೂ ಹೊಗಳಲೇ ಬೇಕು. ಇದನ್ನು ಕಂಡು 'ಹೊಗಳಿ ಎನ್ನ ಹೊನ್ನ ಶೂಲಕ್ಕೇರಿಸದಿರಿ' ಎಂದ ಬಸವಣ್ಣನ ವಚನ ನೆನಪಿಗೆ ಬರುತ್ತದೆ.

—ಜಯಂತಿ ಶಾಸ್ತ್ರಿ, ಮೈಸೂರು



## ಗತಕಾಲದತ್ತ

ಕಲರ್ಸ್ ಕನ್ನಡದಲ್ಲಿ ಇತ್ತೀಚೆಗೆ ಶುರುವಾಗಿರುವ 'ಚಿಕ್ಕೆಜಮಾನಿ' ಮನಸೆಳೆಯುತ್ತಿದ್ದಾಳೆ. ಒಂದು ಕಾಲದಲ್ಲಿ ನಮ್ಮ ದೇಶದಲ್ಲಿ ರೂಢಿಯಲ್ಲಿದ್ದ ಬಾಲ್ಯವಿವಾಹ, ಸತಿಪದ್ಧತಿಯೆಂಬ ಅನಿಷ್ಠ ಸಂಪ್ರದಾಯದ ವಿರುದ್ಧ ಅನಿರುದ್ಧನ ಹೋರಾಟ ಮಾರ್ಮಿಕವಾಗಿದೆ. ಭೂಮಿಕಾಳ ಮುಗ್ಧತೆಯ ಮಾತುಗಳ ಹಿಂದೆ ವಿಷಯದ ಕರಾಳತೆಯು ಜ್ವಲಿಸುತ್ತಿದೆ. ತನ್ನ ಅಮಾಯಕ ಮಾತುಗಳಿಂದಲೇ ಎಲ್ಲರನ್ನೂ ಎಚ್ಚರಿಸುತ್ತಾಳೆ. ಮನೆಯ ಸದಸ್ಯರು, ಊರಿನ ಮುಖಂಡರು ಎದುರಿಸುವ ಅನಿರುದ್ಧನ ಛಲ ಮನ ಮುಟ್ಟುವಂತಹುದು. ಅವನ ದಿಟ್ಟತನ ಅಂದಿನ ಸಮಾಜ ಸುಧಾರಕರಾದ ರಾಜಾರಾಂ ಮೋಹನರಾಯ್, ದಯಾನಂದ ಸರಸ್ವತಿ, ಆತ್ಮಾರಾಮ್ ಪಾಂಡುರಂಗರಂತಹ ಸಮಾಜ ಸುಧಾಕರನ್ನು ನೆನಪಿಸುತ್ತಾ ಗತಕಾಲದತ್ತ ಎಳೆಯುತ್ತಿದೆ. ಕೆಲವು ಶತಮಾನದ ಹಿಂದಿನ ಸಾರೋಟುಗಳು, ಆಂಗ್ಲರ ಕಾಲದ ಮೋಟಾರು ಬಂಡಿಗಳು, ಪಾತ್ರೆಗಳು, ಉಡುಗೆ ತೊಡುಗೆಗಳು ಆ ಯುಗದ ಪರಿಚಯವನ್ನು ಮಾಡಿಸುತ್ತಿವೆ.

ಪಾತ್ರಧಾರಿಗಳ ಆಂಗಿಕ ಹಾವಭಾವಕ್ಕೂ ತುಟಿಗಳ ಚಲನೆಗೂ ತುಲನೆಯಾಗದಿರುವುದೇ ಒಂದು ಋಣಾತ್ಮಕ ಅಂಶವೆಂಬುದನ್ನು ಬಿಟ್ಟರೆ 'ಚಿಕ್ಕೆಜಮಾನಿ' ನಮ್ಮೆಲ್ಲರನ್ನೂ ಆಕರ್ಷಿಸುತ್ತಿದ್ದಾಳೆ.

—ಪುಷ್ಪ ಎನ್.ಕೆ. ರಾವ್

## ಪ್ರಶಂಸನೀಯ ಕೆಲಸ

ಕಲರ್ಸ್ ಕನ್ನಡದ 'ಕನ್ನಡತಿ'ಯ ಭುವಿ ಪಾತ್ರಧಾರಿ ಅನೇಕ ಇಂಗ್ಲಿಷ್ ಶಬ್ದಗಳಿಗೆ ಕನ್ನಡ ನುಡಿಗಟ್ಟುಗಳನ್ನು ಬಳಸಿ ಮಾತನಾಡುವುದು ಸ್ವಾಗತಾರ್ಹ. ಇತ್ತೀಚಿನ ದಿನಗಳಲ್ಲಿ ಇಂಗ್ಲಿಷ್ ಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕುವುದು ತುಂಬಾ ಕಷ್ಟ. ಈ ನಿಟ್ಟಿನಲ್ಲಿ 'ಕನ್ನಡತಿ' ಧಾರಾವಾಹಿಯು ಮಾಡುತ್ತಿರುವುದು ಅತ್ಯಂತ ಶ್ಲಾಘನೀಯ ಕೆಲಸ.

—ಮಧುಮತಿ ಅಭಿಷೇಕ್, ಚಿತ್ರದುರ್ಗ

ಅದ್ಭುತ ದೃಶ್ಯ: ಕನ್ನಡಿಯಲ್ಲಿ ಹರ್ಷ, ಭುವಿಗೆ ತನ್ನ ಪ್ರೀತಿಯನ್ನು ವ್ಯಕ್ತಪಡಿಸುವ ರೀತಿ ವಿಭಿನ್ನವಾಗಿದೆ, ಸೊಗಸಾಗಿದೆ. ಆ ದೃಶ್ಯಗಳು ಅದ್ಭುತವಾಗಿ ಮೂಡಿವೆ.

—ಶೋಭಾ, ಬೆಂಗಳೂರು

## ಮನಕಲಕಿದ ನೃತ್ಯ

ಕಲರ್ಸ್ ಕನ್ನಡದ 'ರಾಜಾ ರಾಣಿ' ರಿಯಾಲಿಟಿ ಶೋನಲ್ಲಿ ಪ್ರಶಾಂತ್–ರೂಪಾ ದಂಪತಿ ವೃದ್ಧರಾಗಿ ಮಾಡಿದ ನೃತ್ಯದ ಮೂಲಕ ಯುವ ಜನಾಂಗಕ್ಕೆ ಉತ್ತಮ ಸಂದೇಶ ನೀಡಿದ್ದಾರೆ.

ಇಳಿವಯಸ್ಸಿನಲ್ಲಿಯೂ ಅನ್ಯೋನ್ಯರಾಗಿದ್ದ ಅವರನ್ನು ಗಂಡುಮಕ್ಕಳು ನೋಡಿಕೊಳ್ಳುವ ನೆವದಲ್ಲಿ ಆ ವೃದ್ಧ ಜೋಡಿಯನ್ನು ಬೇರ್ಪಡಿಸಲು ಹೊರಟಾಗ ಅವರು ಅನುಭವಿಸುವ ಸಂಕಟ ಹಾಗೂ ನಟಿ ತಾರಾ ತಮ್ಮ ತಂದೆ ತಾಯಿಗಳನ್ನು ನೆನೆದು ಬಿಕ್ಕಿ ಬಿಕ್ಕಿ ಅತ್ತದ್ದು ಎಲ್ಲರ ಕಣ್ಣಂಚಿನಲ್ಲೂ ನೀರು ತರಿಸಿತ್ತು. ಯುವ ಜನಾಂಗ ಪೋಷಕರ ಬಗ್ಗೆ ನಿರ್ಲಕ್ಷ್ಯ ವಹಿಸುತ್ತಿರುವ ಇಂದಿನ ದಿನಗಳಲ್ಲಿ ಇಂತಹ ಕಾರ್ಯಕ್ರಮಗಳು ನೀಡುವ ಸಂದೇಶ ತುಂಬಾ ಪ್ರಾಮುಖ್ಯತೆಯನ್ನು ಪಡೆಯುತ್ತದೆ.

—ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರ್

## ವೈದ್ಯರ ಆಶಯ ಫಲಿಸಲಿ

ಕಲರ್ಸ್ ಕನ್ನಡದ 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮದಲ್ಲಿ ಒಂದು ಸಂಗತಿಯನ್ನು ನೋಡಿದೆವು. ಕಾರ್ಯಕ್ರಮದ ಸ್ಪರ್ಧಿ ಸೂರ್ಯಕಾಂತ್ ಅವರ ಹಾಡುಗಾರಿಕೆಯನ್ನು ಮೆಚ್ಚಿ, ಅವರ ಉಗ್ಗಿನ ಸಮಸ್ಯೆಗೆ ಚಿಕಿತ್ಸೆ ನೀಡಿ ಎಲ್ಲರಂತೆ ಮಾತನಾಡುವ ಹಾಗೆ ಮಾಡಬಹುದು ಎಂದು ವಿಶೇಷ ಅತಿಥಿಯಾಗಿ ಬಂದಿದ್ದ ವೈದ್ಯರು ತಿಳಿಸಿದರು. ಉಗ್ಗಿನ ಸಮಸ್ಯೆಯಿಂದ ಬಳಲಿದ ಕೆಲವು ಪ್ರಸಿದ್ಧ ವ್ಯಕ್ತಿಗಳ ವಿಷಯವನ್ನು ಹೇಳಿ, ಅವರೆಲ್ಲ ಚಿಕಿತ್ಸೆ ಪಡೆದು ಗುಣಮುಖರಾದರು ಎಂದು ತಿಳಿಸಿದರು. ಕಾರ್ಯಕ್ರಮವನ್ನು ವೀಕ್ಷಿಸಿ, ಹಾಡುಗಾರಿಕೆಯನ್ನು ಮೆಚ್ಚಿ, ಚಿಕಿತ್ಸೆ ಕೊಡಲು ಮುಂದಾಗಿ ಬಂದಿರುವ ಆ ವೈದ್ಯರನ್ನು ಶ್ಲಾಘಿಸೋಣ.

—ಕೆ.ಎಸ್. ಸವಿತ, ಬೆಂಗಳೂರು

## ಬಹುಮಾನ ನೀಡಿ

ಉದಯ ಟೀವಿಯ 'ಉಡುಗೊರೆ'ಗಳ ಉತ್ಸವ ಕಾರ್ಯಕ್ರಮದಲ್ಲಿ ವಿಜೇತರಾದವರೂ ಬಹುಮಾನ ವಂಚಿತರಾಗಿದ್ದಾರೆ. ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ಗಗನಕುಸುಮ. ಈ ಸ್ಪರ್ಧೆಯಲ್ಲಿ ಗ್ರಾಮೀಣ ಭಾಗದ ಬಹುಪಾಲು ಮಂದಿ ಭಾಗವಹಿಸಿದ್ದಾರೆ. ಕೆಲವು ಭಾಗಗಳಲ್ಲಿ ಮೊಬೈಲ್ ನೆಟ್‌ವರ್ಕ್ ಕೊರತೆ ಇರುವುದರಿಂದ ಪರದಾಡ ಬೇಕಾಗುತ್ತದೆ. ಆದರೂ ಅವರು ಉತ್ಸಾಹದಿಂದ ಭಾಗವಹಿಸಿದ್ದಾರೆ.

ವಿಜೇತರಿಗೆ ಕರೆಗಳು ಬಂದಾಗ ನೆಟ್‌ವರ್ಕ್ ಕೊರತೆಯಿಂದ ಅಥವಾ ಹವಾಮಾನ ವೈಪರೀತ್ಯ ಮಳೆ ಬಂದಿರುವ ಕಾರಣ ಕರೆ ತಲುಪದಿರಬಹುದು. ವಿಜೇತರಿಗೆ ಪುನಃ ಸಂಪರ್ಕಿಸಿ ಬಹುಮಾನ ನೀಡುವುದು ಸೂಕ್ತ ಎಂದು ಅನಿಸುತ್ತದೆ.

—ಸಿದ್ಧಾರ್ಥ ಕಾರ್ಕಳ

## ಮಂಗಳಗೌರಿಗೆ ಮಂಗಳ ಹಾಡಲ್ವೇ?

ಹೊಸ ಹೊಸ ಖಳನಾಯಕಿಯರು ಕಾಣಿಸಿಕೊಳ್ಳುತ್ತಾರೆ. ಆದರೆ ಅದೇ ಚರ್ವಿತ ಚರ್ವಣ ಕಥೆ. ಕಲರ್ಸ್ ಕನ್ನಡದ 'ಮಂಗಳಗೌರಿ ಮದುವೆ'ಯ ಜಾಹೀರಾತು ಕೂಡ ನೋಡಲು ಅಸಹನೀಯ. ಒಂದು ವರ್ಗದ ಪ್ರೇಕ್ಷಕರನ್ನು ಗಮನದಲ್ಲಿಟ್ಟುಕೊಂಡು ಸಿನಿಮಾ ಮಾಡಬಹುದು. ಆದರೆ ಅದೇ ರೀತಿ ಧಾರಾವಾಹಿ ಮಾಡಿದಾಗ, ಅದನ್ನು ಸಾದರಪಡಿಸುತ್ತಿರುವ ವಾಹಿನಿಯ ಗುಣಮಟ್ಟ ಕುಸಿಯುತ್ತದೆ. ಕನ್ನಡತಿಯ ತರಹದ ಸದಭಿರುಚಿಯ ಧಾರಾವಾಹಿಯನ್ನು ಪ್ರಸಾರ ಮಾಡುತ್ತಿರುವ ಕಲರ್ಸ್ ಕನ್ನಡ ಚಾನಲ್ ಇನ್ನಾದರೂ ಎಚ್ಚೆತ್ತು ಮಂಗಳಗೌರಿ ಮದುವೆಗೆ ಮಂಗಳ ಹಾಡಿದಲ್ಲಿ ವೀಕ್ಷಕರಿಗೆ ಬಹಳ ಉಪಕಾರವಾಗುತ್ತದೆ.

—ಲಾವಣ್ಯಗೌರಿ ವೆಂಕಟೇಶ್